ಹೋದೆ. ಬರೆದಾಯ್ತು, ನಾನು ಯಾರಿಗೂ ತೋರಿಸೋದಿಲ್ಲ. ಬರೆದಿದ್ದು ನೋಡಿ ಸಲಹೆ, ಸೂಚನೆ ಏನೂ ಕೇಳ್ತಿರಲಿಲ್ಲ. ಆದರೆ ಈ ಮೊತ್ತ ಮೊದಲ ಕಾದಂಬರಿ ಬರೆದಾಗ ನನ್ನ ಹೆಂಡ್ತಿ ಮತ್ತು ಹೆಂಡ್ತಿ ಅಕ್ಕ ಇದ್ರು. ನೋಡಿ ಅಂತ ಕೊಡ್ತಾ ಇದ್ದೆ. ಮೊತ್ತ ಮೊದಲ ಕಾದಂಬರಿಯ ಅನುಭವ ಅಷ್ಟೆ. ಆಗ ಬರೆದಾದ ಮೇಲೆ ನಾನು ಇದನ್ನ ಏನು ಮಾಡುದು! ಪ್ರಕಾಶಕರ ಪರಿಚಯ ನನಗೆ ಏನೇನೂ ಇಲ್ಲ. ನಾನು ಸತತವಾಗಿ ಓದ್ತಾ ಇದ್ದೆ. ನನ್ನ ಓದು ಆ ರೀತಿ ನಡೆದದ್ದು. ಓದುತ್ತಾ ಬದುಕಿದವನು ನಾನು. ಆದ್ರೆ ಕಾಲೇಜಿಗೆ ಹೋಗಿಲ್ಲ. ಹಾಗೆ ಆ ಒಂದು ಪ್ರಪಂಚದಲ್ಲಿ ಬಿದ್ದು ಹೊರಗಿನ ಪ್ರಪಂಚದ ಬಗ್ಗೆ ಅಷ್ಟು ವಿಶೇಷವಾದ ಸಂಪರ್ಕ ಇರಲಿಲ್ಲ. ನಿಸರ್ಗದ ಬಗ್ಗೆ ಬಹಳ ಚೆನ್ನಾಗಿ ಗೊತ್ತಿತ್ತು, ನಾವು ಕೃಷಿಕರಾಗಿ ಬಂದವರು. ಇವತ್ತಿಗೂ ಕೂಡ ಯಾವ ಮರ, ಏನು ಗಿಡ, ಏನದರ ಗುಣ ಅಂತೆಲ್ಲ ಹೇಳಬಲ್ಲೆ. ಹೊರತು ಜನ, ಸಮಾಜದ ಸಂಪರ್ಕವಂತೂ ನನಗೆ ಇಲ್ವೇ ಇಲ್ಲ. ನಾವಿದ್ದಂಥ ಊರು ಹಳ್ಳಿ. ಹಾಗಿತ್ತು. ಜನಸಂಪರ್ಕ ಇರಲಿಲ್ಲ. ವಿದ್ಯಾವಂತರು, ಒಳ್ಳೆ ಸುಸಂಸ್ಕೃತರು ಅಂತ ಹೇಳುವಂಥ ಯಾವ ವ್ಯಕ್ತಿಗಳೂ ಸಹ ನಮ್ಮ ನೆರೆಹೊರೆಯಲ್ಲಿರಲಿಲ್ಲ. ಹಾಗಾಗಿ ನಾವು ಒಂದು ರೀತಿಯಲ್ಲಿ ಕೂಪಮಂಡೂಕಗಳಾಗಿ, ನಮ್ಮದೇ ಒಂದು ಇದರಲ್ಲಿ... ನಮ್ಮದು ಚಿಕ್ಕ ಕುಟುಂಬ. ನಾವು ಐದು ಮಂದಿ, ತಮ್ಮಂದಿರು ಮತ್ತು ತಂಗಿಯಂದಿರು ಸೇರಿ. ನಾನು ಹಿರಿಯವ. ಬಹಳ ಕಷ್ಟದಲ್ಲಿ ಮತ್ತು ಒಂದು ರೀತಿಯಲ್ಲಿ ಸಮಾಧಾನಕರವಾಗಿ ನಾವು ಜೀವಿಸುತ್ತಿದ್ದೆವು. ಕಷ್ಟ ಅಂದ್ರೆ, ಕಾಲದ್ದು. ಸ್ವಾತಂತ್ರ್ಯ, ಇಂಗ್ಲೀಷರು ಹೋದದ್ದು, ಎಲ್ಲ ಕಡೆ ಅದೆಲ್ಲ ನೀಡಿದ ಹೊಡೆತ. ಅದು ನಮಗೂ ಕಷ್ಟ ಇತ್ತು. ನಾವು ನಮ್ಮದೇ ಆದ ರೀತಿಯಲ್ಲಿ, ಇದ್ದುದರಲ್ಲಿ ಬಹಳ ಕಡಿಮೆ ಖರ್ಚಿನಲ್ಲಿ ನಾವು ಜೀವನ ಮಾಡ್ತಿದ್ದೆವು. ಹಾಗಾಗಿ ನಮ್ಗೆ ಅದೊಂದು ಕಷ್ಟವೂ ಹೌದು, ಸುಖವೂ ಹೌದು ಅಂತ ಹೇಳ್ಬಹುದು. ಕಾಲ ಹಾಗಿತ್ತು ಅಷ್ಟೆ.

ಮೊತ್ತ ಮೊದಲು ನಾನು ಮುವ್ವತ್ತೈದು ಕವಿತೆಗಳನ್ನ, ಕವಿತೆಗಳೆಲ್ಲ ಪ್ರಕಟವಾಗಿದ್ದವು ಪತ್ರಿಕೆಗಳಲ್ಲಿ, ಒಂದು ಸಂಕಲನ ಅಂತ ಮಾಡಿ ದ.ರಾ. ಬೇಂದ್ರೆಯವರಿಗೆ ಕಳಿಸಿಕೊಟ್ಟೆ. ಬೇಂದ್ರೆಯವರು ಅದನ್ನ ಓದಿ ಅದಕ್ಕೆ ಮುನ್ನುಡಿ ಬರೆದು ಕೊಡ್ತೇನೆ ಅಂತ ಹೇಳಿ ಒಂದು ಕಾಗದ ಬರೆದ್ರು. ಅದೊಂದು ನಿಜವಾಗಿಯೂ ವಿಶೇಷವೇ. ಅದೇ ಪ್ರಕಾರ ಅವರು ಬರೆದ್ರು. ಒಂದು ಐವತ್ತು ಪರ್ಸೆಂಟು ಅಥವಾ ಸ್ವಲ್ಪ ಹೆಚ್ಚೇ ಚೆನ್ನಾಗಿದೆ ಅಂತ ಹೇಳಿದ್ರು. ಅವರ ಮಾತುಗಳೆಲ್ಲ ಇವತ್ತಿಗೂ ನೆನಪಿವೆ ನನಗೆ. ಈ ಕಾವ್ಯದಲ್ಲಿ ಕವಿಗೆ ಬಹಳ ನೋವಿದೆ, ಅವನ ನೋವು ಮಾಗಿ ಸಂತಸಪ್ರದವಾದ ಕವಿತೆಗಳು ಬರಲಿ ಅವನಿಂದ ಅಂತೇನೊ ಬರೆದಿದ್ದಾರೆ. ಇನ್ನೊಂದು ಈ ಹೆಚ್ಚಿನ ಕವಿತೆಗಳಲ್ಲಿ ಸಂಸ್ಕೃತ ಪದ ರಂಜನ ಗುಂಜನ ಅಂತ ಬರೆದ್ರು. ಅದರಲ್ಲಿ ಭಾವ ಕಡಿಮೆ. ಆಗ ನನಗೆ ಹದಿನೇಳು ವರ್ಷ ಪ್ರಾಯ. ಶಬ್ದಗಳ ಇದೇ ಹೆಚ್ಚು. ಹೌದು. ಸತ್ಯಕ್ಕೂ ಹೌದದು. ಮತ್ತೆ ನನಗೆ ಆ ಕಾಲದಲ್ಲಿ ಕುವೆಂಪು ನನಗೆ ಬಹಳ, ದೈವವೇ ಆಗಿಬಿಟ್ಟಿದ್ದರು, ಆರಾಧ್ಯದೈವದ ಹಾಗೆ! ಅವರ ಓದಿನ ಹಿನ್ನೆಲೆಯಲ್ಲಿ ಬಂದಂಥ, ಭಯಂಕರ ಶಬ್ದಗಳನ್ನ ಉಪಯೋಗಿಸ್ತಿದ್ದರವರು. ಆ ಶೈಲಿ ನನ್ನನ್ನು ಆಕರ್ಷಿಸಿತ್ತು. ಇದನ್ನ ಓದಿದ ಮೇಲೆ ನನಗೆ ಬೇಡ ಇದು ಅನಿಸಿ ಬಿಟ್ಟುಬಿಟ್ಟೆ ನಾನು.

## ಕಾದಂಬರಿ, ಧಾರಾವಾಹಿ, ಪ್ರಕಾಶನ ಇತ್ಯಾದಿ

ಪ್ರಕಾಶನ ಕ್ಷೇತ್ರದ ಬಗ್ಗೆ ಏನೇನೂ ಗೊತ್ತಿಲ್ಲ. ಹಾಗೆ ನಾನು ಪತ್ರಕರ್ತ ಈಶ್ವರಯ್ಯನವರ ಹತ್ತಿರ ಹೇಳಿದೆ ನಾನು. ಹೀಗೀಗೆ, ಬರೆದಿದ್ದೇನೆ, ಏನು ಮಾಡ್ಬೇಕು ಗೊತ್ತಾಗ್ತ ಇಲ್ಲ. ಈಶ್ವರಯ್ಯ ಆಗ ಅಲ್ಲಿ 'ತುಷಾರ'ದಲ್ಲಿದ್ರು. ಅವರು ಹೇಳಿದ್ರು, 'ಸುಧಾ'ಕ್ಕೆ ಕಳಿಸಿಬಿಡಿ ನೀವು ಅಂತ. ಹಾಗೆ ನಾನು